# ಆಮೆಯ ತ್ಯಾಗ

ಒಂದು ಕಾಡಿನಲ್ಲಿ ಮೊಲವಿತ್ತು. ಅದು ಅಲೆದಾಡುತ್ತಾ ಕಾಡಿನ ಅನತಿ ದೂರದಲ್ಲಿರುವ ಬೆಟ್ಟಕ್ಕೆ ಬಂದಿತು. ಅಲ್ಲೊಂದು ದೊಡ್ಡ ಗಾತ್ರದ ಆಮೆಯನ್ನು ಕಂಡಿತು. ಅದರ ಬಳಿ ಬಂದು ಮೊಲವು ಆಟವಾಡತೊಡಗಿತು. ದಿನವೂ ಹೀಗೆ ಮೊಲವು ಆಮೆಯ ಬಳಿ ಬಂದು ಬೇಸರವನ್ನು ಕಳೆದು ಅದರ ಸ್ನೇಹವನ್ನು ಸಂಪಾದಿಸಿತು.

ಒಂದು ಸಲ ಮೊಲ, 'ಗೆಳೆಯಾ, ನಿನ್ನ ಮೇಲೆ ಕುಳಿತು ನನಗೆ ಕಾಡನ್ನು ಸುತ್ತುವ ಬಯಕೆಯಾಗಿದೆ. ಇದರಿಂದ ನಮ್ಮ ಕಾಡನ್ನು ನಿನಗೆ ತೋರಿಸಿದಂತೆಯೂ ಆಗುತ್ತದೆ' ಎಂದು ತನ್ನ ಮನದ ಇಂಗಿತವನ್ನು ವ್ಯಕ್ತಪಡಿಸಿತು.

ಆಗ ಆಮೆ 'ಬೇಡಾ ಮಿತ್ರಾ, ನೀನು ನನ್ನ ಮೇಲೆ ಕುಳಿತು ಸವಾರಿ ಮಾಡಿದರೆ ಕಾಡಿನ ಮಾಂಸಾಹಾರಿ ಪ್ರಾಣಿಗಳಿಗೆ ನಾನು, ನೀನು ಸುಲಭವಾಗಿ ತುತ್ತಾಗಬೇಕಾಗುತ್ತದೆ' ಎಂದು ಎಚ್ಚರಿಸಿತು. ಪದೇ ಪದೇ ಮೊಲವು ಆಮೆಗೆ ಪೀಡಿಸುತ್ತಿದ್ದರಿಂದ ಅದರ ಬೇಡಿಕೆಯನ್ನು ಈಡೇರಿಸಲು ಸಮ್ಮತಿಸಿತು.

ಕಾಡಿನಲ್ಲಿದ್ದ ಚಿಕ್ಕಪುಟ್ಟ ಪ್ರಾಣಿಗಳು ಆಮೆಯ ಮೇಲೆ ಕುಳಿತ ಮೊಲದ ಮೋಜನ್ನು ಸವಿಯ ತೊಡಗಿದವು. ಅವುಗಳ ಅದೃಷ್ಟಕ್ಕೆ ಯಾವ ಮಾಂಸಾಹಾರಿ ಪ್ರಾಣಿಗಳೂ ಅಲ್ಲಿ ಸುಳಿಯಲಿಲ್ಲ. 'ಹೀಗೆ ದಿನವೂ ಬಂದು ಮೊಲವು ಆಮೆಯ ಮೇಲೆ ಕುಳಿತು ಕಾಡಿನಲ್ಲಿ ಸವಾರಿ ಮಾಡುತ್ತಿತ್ತು. ಇದರಿಂದ ಕಾಡಿನಲ್ಲಿ ಒಂದು ಕಪಟ ನರಿಯು ಪೊದೆಯೊಳಗೆ ಅವಿತು ಇದನ್ನು ನೋಡುತ್ತಿತ್ತು. ಹೇಗಾದರೂ ಮಾಡಿ ಉಪಾಯದಿಂದ ಮೊಲವನ್ನು ಕಬಳಿಸಬೇಕೆಂದು ಮೊಲವು ಇಲ್ಲದ ಸಂದರ್ಭ ನೋಡಿ ಬೆಟ್ಟದಲ್ಲಿ ವಾಸಿಸುತ್ತಿದ್ದ ಆಮೆಯನ್ನು ಸಂಧಿಸಿತು.

ಅಲ್ಲಿ ನರಿಯು ಆಮೆಯನ್ನು ಕಂಡು 'ಮಿತ್ರಾ ನಿಮ್ಮಿಬ್ಬರ ಗೆಳೆತನವು ನನಗೆ ತುಂಬಾ ಇಷ್ಟವಾಯಿತು. ನನ್ನನ್ನು ನಿಮ್ಮ ಸ್ನೇಹಿತನನ್ನಾಗಿ ಮಾಡಿಕೊಳ್ಳಿ' ಎಂದು ಕುಹಕ ನುಡಿಗಳನ್ನಾಡಿತು. ಕುತಂತ್ರಿ ನರಿಯ ಕಪಟವನ್ನರಿತ ಆಮೆಯು ಕೂಡಲೇ ಎಚ್ಚೆತ್ತುಕೊಂಡಿತು.

'ನೋಡೋಣ ನಾಳೆ ಬಾ..' ಎಂದು ಆಮೆಯು ನರಿಯತ್ತ ತಿರಸ್ಕಾರ ನೋಟವನ್ನು ಬೀರಿ ಹೇಳಿತು.

ಇನ್ನು ಮುಂದೆ ತಾನಿಲ್ಲಿರುವುದು ಕ್ಷೇಮವಲ್ಲ! ತನ್ನೊಂದಿಗೆ ಮೊಲವೂ ಇದ್ದರೆ ನರಿಯು ತನ್ನ ಸ್ನೇಹ ಮಾಡಿ ಮೊಲವನ್ನು ಕಬಳಿಸದೆ ಇರಲಾರದು ಎಂದು ಕೊಂಡ ಆಮೆಯು ತನ್ನ ಸ್ನೇಹವನ್ನೇ ತ್ಯಾಗ ಮಾಡಿ ರಾತ್ರೋರಾತ್ರಿ ತನ್ನ ಪಯಣವನ್ನು ಬೇರೊಂದು ಬೆಟ್ಟಕ್ಕೆ ಬೆಳೆಸಿತು.

ಅಂದು ಮೊಲಕ್ಕಿಂತ ನರಿಯು ಬೇಗ ಆಮೆಯು ವಾಸವಾಗಿರುವ ಬೆಟ್ಟಕ್ಕೆ ಬಂದಿತು. ಆದರೆ ಆಮೆಯು ಎಲ್ಲಿಯೂ ಅದಕ್ಕೆ ಗೋಚರಿಸಲೇ ಇಲ್ಲ! ಮೊಲವು ಬಂದರೆ ಆಮೆಯು ಬಂದೇ ಬರಬಹುದೆಂದು ಬೆಟ್ಟದ ಮೇಲೆ ಮೊಲದ ನಿರೀಕ್ಷೆಯಲ್ಲಿ ನರಿಯು ಕುಳಿತಿತು.

ಸ್ವಲ್ಪ ಹೊತ್ತಿನ ಮೇಲೆ ದೂರದಲ್ಲಿ ಚೆಲ್ಲಾಟವಾಡುತ್ತಾ ಬರುತ್ತಿರುವ ಮೊಲವನ್ನು ಕಂಡು ನರಿಯ ಬಾಯಲ್ಲಿ ನೀರೂರಿತು. ಬೆಟ್ಟದ ಹತ್ತಿರ ಬರುತ್ತಿದ್ದಂತೆ ಅದು ನರಿಯನ್ನು ಕಂಡು ದಿಗ್ಭ್ರಾಂತಗೊಂಡಿತು. ತಾನು ಆಮೆಯ ಮೇಲೆ ಕುಳಿತು ಸವಾರಿ ಮಾಡಲೇಬಾರದಿತ್ತು. ಆಮೆಯ ಬುದ್ಧಿ ಮಾತು ಕೇಳದೆ ತಪ್ಪು ಮಾಡಿದೆ ಎಂದು ಆ ಕ್ಷಣ ಮೊಲವು ಪಶ್ಚಾತಾಪಗೊಂಡಿತು. ನರಿಯು ಸ್ನೇಹಿತನನ್ನು ಕಬಳಿಸಿದೆ, ಈಗ ನನ್ನನ್ನು ಕಬಳಿಸಲು ಹೊಂಚು ಹಾಕುತ್ತಿದೆ ಎಂದು ಅಲ್ಲಿಂದ ಮೊಲವು ಕಾಲಿಗೆ ಬುದ್ಧಿ ಹೇಳಿತು. ಮೊಲಕ್ಕೆ ಆಮೆಯ ಸ್ನೇಹ ತ್ಯಾಗದ ವಿಚಾರವು ಕೊನೆಯವರೆಗೂ ತಿಳಿಯಲೇ ಇಲ್ಲ!

- ರಾಜಕುಮಾರ ಭೀ ವಗ್ಯಾನವರ

